# ಪಿಂಕ್ ಲೇಕ್

ಆಸ್ಟ್ರೇಲಿಯಾದ ನಡುಗಡ್ಡೆಯೊಂದರ ಮೇಲಿಂದ ಹಾದುಹೋಗುವ ವಿಮಾನ ಪ್ರಯಾಣಿಕರೆಲ್ಲರೂ ತಮ್ಮ ತಮ್ಮ ಸೀಟ್‌ಬೆಲ್ಟ್‌ಗಳನ್ನು ಸಡಿಲಿಸಿ ಕಿಟಿಕಿಯಿಂದ ಗಾಢ ಗುಲಾಬಿ ಬಣ್ಣದಲ್ಲಿ ಕಣ್ಣಿಗೆ ಕುಕ್ಕುವ ಈ ಕೊಳವನ್ನು ಅಚ್ಚರಿಯಿಂದ ದಿಟ್ಟಿಸಿ ನೋಡುವುದು ಸಾಮಾನ್ಯ ಸಂಗತಿ. ಥೇಟ್ ಬಬಲ್ ಗಮ್ ಪಿಂಕ್ ಕಲರ್‌ನಲ್ಲಿ ಕಾಣುವ ಇದು ಹಿಲ್ಲಿಯರ್ ಕೊಳ. ರೆಚೆರ್ಚೆ ಆರ್ಚಿಪೆಲಾಗೊ ಹೆಸರಿನ ದೊಡ್ಡ ನಡುಗಡ್ಡೆಯ ತುದಿಯಲ್ಲಿದೆ.

ಅಧಿಕೃತ ದಾಖಲೆಗಳ ಪ್ರಕಾರ, ಸಮುದ್ರ ಸಂಶೋಧಕ ಹಾಗೂ ಹೈಡ್ರೊಗ್ರಾಫರ್ ಆಗಿದ್ದ ಮಾಥ್ಯೂ ಫ್ಲಿಂಡರ್ ಎಂಬಾತ ಈ ಕೊಳವನ್ನು ಮೊದಲು ಪತ್ತೆ ಹಚ್ಚಿದ. 1802ರಲ್ಲಿ ಈತ ನಡುಗಡ್ಡೆಯ ಎತ್ತರವಾದ ಗುಡ್ಡವನ್ನು ಹತ್ತಿ ಸುತ್ತಲಿನ ನೀರನ್ನು ಸರ್ವೇ ಮಾಡಲು ಹೋದಾಗ ಅಪೂರ್ವವಾದ ಗುಲಾಬಿ ಕೊಳವು ಕಣ್ಣಿಗೆ ಬಿದ್ದಿತಂತೆ. ಕೆಲವೇ ವರ್ಷಗಳ ಹಿಂದೆ ಉಪ್ಪು ಉತ್ಪಾದಿಸುವ ಘಟಕವೊಂದು ಸ್ಥಾಪಿತವಾಗುವುದಕ್ಕಿಂತ ಮೊದಲು ಈ ಕೊಳವು ಮಾನವ ಸ್ಪರ್ಶದಿಂದ ದೂರ ಉಳಿದಿತ್ತು.

ಈ ಪ್ರಾಕೃತಿಕ ಅಚ್ಚರಿಯು ನೋಡುವುದಕ್ಕೆ ಎಷ್ಟು ಮನೋಹರವಾಗಿದೆಯೋ ಅಷ್ಟೇ ವಿಸ್ಮಯವನ್ನೂ ತನ್ನಲ್ಲಿ ಅಡಗಿಸಿಕೊಂಡಿದೆ. ಇದುವರೆಗೂ ಯಾವ ವಿಜ್ಞಾನಿಗಳಿಗೂ ಇದರ ರಹಸ್ಯವನ್ನು ಭೇದಿಸಲು ಸಾಧ್ಯವಾಗಿಲ್ಲ. ಇಲ್ಲಿಯವರೆಗಿನ ಯಾವುದೇ ಥಿಯರಿಗಳು, ಈ ವಿಶಿಷ್ಟ ಬಣ್ಣಕ್ಕೆ ಕಾರಣ-ವೇನೆಂಬುದನ್ನು ತಿಳಿಸಿಲ್ಲ. ಕೆಲವರು ಈ ಕೊಳದಲ್ಲಿರುವ ಡನೇಲಿಯಲ್ಲಾ ಸಲೀನಾ ಮತ್ತು ಹ್ಯಾಲೋಬ್ಯಾಕ್ಟೀರಿಯಾಗಳ ಕಾರಣದಿಂದಾಗಿ ಈ ಬಣ್ಣ ಬಂದಿರಬಹುದು ಎಂದು ತಿಳಿಸಿದರೆ, ಮತ್ತೆ ಕೆಲವರು ಲವಣದ ಗಟ್ಟಿ ಹೊದಿಕೆ (ಸಾಲ್ಟ್ ಕ್ರಸ್ಟ್) ಯಲ್ಲಿನ ಹ್ಯಾಲೋಫಿಲಿಕ್ ಬ್ಯಾಕ್ಟೀರಿಯಾದ ಇರುವಿಕೆಯೇ ಗುಲಾಬಿ ಬಣ್ಣಕ್ಕೆ ಕಾರಣ ಎಂದು ಪ್ರತಿಪಾದಿಸುತ್ತಾರೆ. ಆದರೆ ಯಾವುದೂ ದೃಢವಾಗಿ ಖಚಿತವಾಗಿಲ್ಲ.

ಸುಮಾರು 600 ಮೀಟರ್‌ಗಳಷ್ಟು ಉದ್ದವಿರುವ ಈ ಕೊಳದ ಗಾಢ ಗುಲಾಬಿ ಬಣ್ಣವಂತೂ ಭ್ರಾಮಕವಲ್ಲ. ಕೊಳದ ನೀರನ್ನು ಯಾವುದೇ ಪಾತ್ರೆಯಲ್ಲಿ ತುಂಬಿ ಇಟ್ಟರೂ ಅದು ಗುಲಾಬಿ ಬಣ್ಣದ್ದಾಗಿರುತ್ತದೆ. ಪೆಪ್ಪರ್‌ಬಾಕ್, ನೀಲಗಿರಿ ಮರಗಳು ಹಾಗೂ ಮರಳಿನಿಂದ ಆವರಿಸಿದ್ದು, ಅಷ್ಟೇನೂ ಆಳವಿಲ್ಲದೆ ಈಜಬಹುದಾದ ಈ ಕೊಳದಲ್ಲಿ ಯಾತ್ರಿಕರು ಮುಳುಗೇಳುತ್ತಾರೆ. ಒಟ್ಟಿನಲ್ಲಿ 'ಸ್ಟ್ರಾಬೆರ್ರಿ ಮಿಲ್ಕ್ ಶೇಕ್'ನಂತೆ ಕಾಣುವ ಹಿಲ್ಲಿಯರ್ ಕೊಳವು ನಿಸರ್ಗದ ಅತ್ಯಂತ ಅಚ್ಚರಿಯ ನೋಟವಂತೂ ಹೌದು.

■ ವಿನಯ್ ಕುಮಾರ್ ಬಿ. ಹೆಚ್.



